# ಕಾಳುಮೆಣಸು ತೋಟಗಳ ಪುನ:ಶ್ಚೇತನ ಕಾರ್ಯಕ್ರಮ

## ಮಾರ್ಗಸೂಚಿ:2014-15

**I. ಕಾರ್ಯಕ್ರಮ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

| ಕ್ರ ಸಂ | ಕಾರ್ಯಕ್ರಮ | ವೆಚ್ಚ | ಗರಿಷ್ಠ ಸಹಾಯಧನ |
|---|---|---|---|
| (i) | **ಕಾಳುಮೆಣಸು ಪುನ:ಶ್ಚೇತನ** | ರೂ. 40,000/ ಹೆ. ಗರಿಷ್ಠ 2 ಹೆ / ಫಲಾನುಭವಿಗೆ | ಶೇ. 50 ರಷ್ಟು ರೂ. 20,000 / ಹೆ. |

**II. ಕಾರ್ಯಕ್ರಮ ಉದ್ದೇಶಗಳು:**

1. 10 ವರ್ಷಕ್ಕಿಂತ ಹಳೆಯ ಅನುತ್ಪಾದಿತ ತೋಟಗಳ ಉತ್ಪಾದಕತೆ/ಉತ್ಪಾದನೆಯನ್ನು ಹೆಚ್ಚಿಸುವುದೇ ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿರುತ್ತದೆ.

2. ಇದರಲ್ಲಿ ಸಾಧಾರಣವಾಗಿ ಕಾಳುಮೆಣಸು ಬಳ್ಳಿಗಳು ರೋಗಕ್ಕೆ ತುತ್ತಾಗಿ ಹೆಚ್ಚಿಗೆ ಸತ್ತಿರುವ ಹಾಗೂ ಕಡಿಮೆ ಬಳ್ಳಿಗಳು (Plant Population) ಇರುವಂತಹ ತೋಟಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗಿರುತ್ತದೆ.

3. ಇಂತಹ ತೋಟಗಳಲ್ಲಿ ಸತ್ತು ಹೊದ ಬಳ್ಳಿಗಳ ಜಾಗದಲ್ಲಿ ಸೂರಗು ರೋಗ ಬಾದೆಯನ್ನು ತಡೆದುಕೊಳ್ಳುವ ತಳಿಗಳನ್ನು ಮಾತ್ರ ಮರು ನಾಟಿ ಮಾಡಿಸುವುದು.

4. ಬಳ್ಳಿಗಳನ್ನು ತೆಗೆಯುವುದು ಹಾಗೂ ಬಳ್ಳಿ ಇಲ್ಲದೇ ಇರುವ ಮರಗಳಿಗೆ ನಾಟಿ ಮಾಡುವುದು, ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಮರದ ಬುಡದಲ್ಲಿ ಸುತ್ತಲು ಅಗೆದು ಸ್ವಚ್ಛತೆ ಕಾಪಾಡುವುದು, ಗೊಬ್ಬರ/ಹಸಿರೆಲೆ ಗೊಬ್ಬರ (green leaf manure) ಗಳನ್ನು ಬೆಳೆಸುವುದು, ಮಳೆಗಾಲದಲ್ಲಿ, ನೀರು ಬಸಿದು ಹೋಗದಂತೆ ಗಿಡಗಳ ಹತ್ತಿರ ಮಳೆ ನೀರನ್ನು ಸಂಗ್ರಹಿಸಿ ಭೂಮಿಯಲ್ಲಿ ಇಂಗುವಂತೆ ಮಾಡುವುದು, ಒಟ್ಟಾರೆ ಎಲ್ಲಾ ಪದ್ದತಿಗಳನ್ನು ಅನುಸರಿಸಿಕೊಂಡು ತೋಟಗಳನ್ನು ಕಾಳುಮೆಣಸು ಬಳ್ಳಿಗಳ ಉತ್ಪಾದಕತೆಯನ್ನು ಹೆಚ್ಚಿಸುವುದೇ ಇದರ ಮೂಲ ಉದ್ದೇಶವಾಗಿರುತ್ತದೆ (to make senile gardens more productive).

**III.ಅನುದಾನ ಮತ್ತು ಸಹಾಯಧನ :**

2014-15 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ರಾಜ್ಯದ ಈ ಕಾರ್ಯಕ್ರಮಕ್ಕಾಗಿ ಭೌತಿಕ 1000 ಹೆ. ಆರ್ಥಿಕ ರೂ. 200.00 ಲಕ್ಷಗಳ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ NHM, GOI ರವರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**IV. ತಾಂತ್ರಿಕ ವೈಶಿಷ್ಟತೆಗಳು:**

1. ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ, ಹಾಸನ ರವರು KSHMA ಕಛೇರಿಗೆ 2010-11 ನೇ ಸಾಲಿನಲ್ಲಿ ಲಿಖಿತವಾಗಿ ಕೋರಿರುವಂತೆ ಹಾಗೂ ಹಿಂದಿನ ಸಾಲುಗಳಲ್ಲಿ ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಕಾಳು ಮೇಣಸು ಪುನ:ಶ್ಚೇತನ ಕಾರ್ಯಕ್ರಮ ಅನುಷ್ಟಾನ ಗೊಳಿಸಲು ಪ್ರತಿ ಹೆ. ಗೆ ರೂ. 40000/- ವೆಚ್ಚದ ಬದಲಿಗೆ ರೂ. 20000/- ಗಳಿಗೆ

ಸಿಮೀತಗೊಳಿಸಿ ಇದಕ್ಕೆ ಶೇ 50% ರಂತೆ ಪ್ರತಿ ಹೆ. ಗೆ ರೂ. 10000/- ಕ್ಕೆ ಸಹಾಯಧನ ಮಿತಿಗೊಳಿಸಿ ಪ್ರತಿ ಫಲಾನುಭವಿಗೆ 2 ಹೆಕ್ಟರ್ ವರೆವಿಗೆ ಮಿತಿಗೊಳಿಸಿದೆ.

2. **ಕಾಳು ಮೆಣಸು ಪುನ:ಶ್ಚೇತನಕ್ಕೆ ಶಿಫಾರಸ್ಸು ಮಾಡಿರುವ ಪದ್ಧತಿಗಳು**

| **ಕ್ರ.ಸಂ.** | **ಪರಿಕರ / ಇತರೆ ಕಾರ್ಯಕ್ರಮ** | **ಪ್ರಮಾಣ / ಹೆ.** | **ಅಂದಾಜು ಮೊತ್ತ** | **ಸಹಾಯಧನದ ಮೊತ್ತ** |
|---|---|---|---|---|
| **1** | **2** | **3** | **4** | **5** |
| 1 | ಕಾಳು ಮೆಣಸು ಸಸಿಗಳ ಬುಟ್ಟಿ (ರೂ. 6.00/ ಬುಟ್ಟಿ) | 500 ಸಂಖ್ಯೆ | 3000/- | 1500/- |
| 2 | ಟ್ರೈಕೋಡರ್ಮಾ ಹರಿಜಿಯಾನಂ (ರೂ. 94.00/ ಕೆ.ಜಿ) | 30 ಕೆ.ಜಿ. | 2820/- | 1410/- |
| 3 | ಸುಡೋಮೋನಸ್ (ರೂ. 60.00/ ಕೆ.ಜಿ) | 25 ಕೆ.ಜಿ. | 2700/- | 1350/- |
| 4 | ಕಾಪರ್ ಸಲ್ಫೇಟ್ (ರೂ. 180.00/ ಕೆ.ಜಿ) | 10 ಕೆ.ಜಿ. | 1800/- | 900/- |
| 5 | ಕೊಟ್ಟಿಗೆ ಗೊಬ್ಬರ (10ಕೆ.ಜಿ/ಗಿಡಕ್ಕೆ), ಬೇವಿನ ಹಿಂಡಿ (400ಕೆ.ಜಿ/ಹೆಕ್ಟರ್), ಇತರೆ ಸಾವಯುವ ಗೊಬ್ಬರ | - | 6680/- | 3340/- |
| 6 | ರೋಗ ಮತ್ತು ಕೀಟ ಬಾಧಿತ ಗಿಡಗಳ ನಿರ್ಮೂಲನೆ, ಮರುನಾಟಿ ಮಾಡುವುದು ಮತ್ತು ಬೇಸಿಗೆಯಲ್ಲಿ ನೀರಾವರಿ ಸೌಲಭ್ಯ ಇತರೆ ಬೇಸಾಯ ಕ್ರಮಗಳು | - | 2000/- | 1000/- |
| 7 | ರೋಗ ಮತ್ತು ಕೀಟ ನಿರ್ವಹಣೆಗೆ ಔಷಧಿಗಳ ಸಿಂಪಡಣೆ ಇತ್ಯಾದಿ. | 2 ಬಾರಿ | 1000/- | 500/- |
| **ಒಟ್ಟು ಮೊತ್ತ** | | | **20000/-** | **10000/-** |

*** ಮೇಲೆ ತಿಳಸಿರುವ ಘಟಕವಾರು Indicative Costs ಗಳು ವಾಸ್ತವ ಬೇಡಿಕೆ ಹಾಗೂ ಅವಕಾಶಗಳಿಗನುಗುಣವಾಗಿ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವೆಚ್ಚವನ್ನು ಭರಿಸಬಹುದಾಗಿದ್ದು ಆದರೆ ಒಟ್ಟಾರೆ ವೆಚ್ಚ ಮೀರದಂತೆ ಸಹಾಯಧನಕ್ಕೆ ಪರಿಗಣಿಸಲು ಅವಕಾಶ ಕಲ್ಪಿಸಿದೆ.**

3. Calender of Events for Pepper Rejuvenation.
    - July- August: Inter cultivation, application of inputs and gap filling.
    - September : October: Pruning - unwanted branches.
4. ತೋಟಗಳನ್ನು ಆಯ್ಕೆ ಮಾಡಿದ ನಂತರ ತೋಟಗಳ ಸೂಕ್ತತೆಯನ್ನು ಉಪಚಾರದ ಬಗ್ಗೆ ಅವರಿಗೆ ಕ್ರಮ ಸಂಖ್ಯೆ 1 ರಿಂದ 7 ರ ವರೆಗೆ ಉಪಚಾರಗಳಲ್ಲಿ ಬದಲಾಯಿಸಿಕೊಳ್ಳಬಹುದು.
5. ಮೇಲೆ ತಿಳಿಸಿರುವ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಕಾಳುಮೇಣಸು ಪುನ:ಶ್ಚೇತನ ಕಾರ್ಯಕ್ರಮವನ್ನು ಆಯಾ ಜಿಲ್ಲೆಗೆ ನಿಗಧಿಪಡಿಸಿರುವ ಆರ್ಥಿಕ ಗುರಿಗಳಿಗೆ ಮೀರದಂತೆ ಅನುಷ್ಠಾನ ಮಾಡಲು ಕ್ರಮ ವಹಿಸುವುದು.
6. ಈಗ ನೀಡಿರುವ ಉಪಚಾರಗಳಿಗೆ ತಗಲುವ ವೆಚ್ಚವು indicative cost ಆಗಿದ್ದು, ಕ್ಷೇತ್ರಮಟ್ಟದಲ್ಲಿ ಆಯಾ ತೋಟದಲ್ಲಿ ತೆಗೆದುಕೊಂಡ ಉಪಚಾರಕ್ಕೆ ತಕ್ಕಂತೆ ಸಹಾಯಧನ ಲೆಕ್ಕಾಚಾರ ಹಾಕಿ ಪುನ:ಶ್ಚೇತನ ಕಾರ್ಯಕ್ರಮಕ್ಕೆ ಒಟ್ಟು ವೆಚ್ಚದ ಶೇ.50 ರಂತೆ ಗರಿಷ್ಠ ರೂ. 10,000/- ರವರೆಗೆ ಒಬ್ಬ ಫಲಾನುಭವಿಗೆ ಗರಿಷ್ಠ 2 ಹೆ. ಮೀರದಂತೆ ಸಹಾಯಧನವನ್ನು ಮಿತಿಗೊಳಿಸುವುದು.

**V. ಫಲಾನುಭವಿಗಳ ಅರ್ಹತೆ:**

1) ಫಲಾನುಭವಿಗಳು ರೈತರಾಗಿದ್ದು (RTC) ಜಮೀನು ಅವರ ಹೆಸರಿನಲ್ಲಿರಬೇಕು.
2) ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು (Notary ರವರಿಂದ ದೃಢೀಕರಣ ಮಾಡಿಸಬೇಕು)
3) ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ,ಕುಟಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
4) ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
5) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.

**VI. ಅರ್ಜಿಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-**

1) ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಸ್ಥಳಿಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ತಾಲ್ಲೂಕಿನ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು. ಈ ಬಗ್ಗೆ ಎಲ್ಲಾ ಮಾಧ್ಯಮಗಳನ್ನು ಬಳಸಿಕೊಂಡು ಪ್ರಚಾರ ನೀಡತಕ್ಕದ್ದು.
2) ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗದಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು. ಒಂದು ವೇಳೆ ನಿಗಧಿಪಡಿಸಿರುವ ಗುರಿಗಳಿಗಿಂತ ಹೆಚ್ಚುವರಿ ಅರ್ಜಿ ಬಂದಲ್ಲಿ ಇಂತಹ ರೈತರಿಗೆ ಅನುದಾನ ಉಳಿಕೆಯಾಗಿದ್ದಲ್ಲಿ ಮಾತ್ರ ಅರ್ಜಿಯನ್ನು ಜೇಷ್ಠತಾ ಆಧಾರದ ಮೇಲೆ ಪರಿಗಣಿಸುವ ಬಗ್ಗೆ ಲಿಖಿತವಾಗಿ ತಿಳಿಸತಕ್ಕದ್ದು.
3) ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.
    a. ನಿಗದಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ.
    b. ದಿನಾಂಕ: ಜನವರಿ ನಂತರದ ಪಹಣಿ (RTC) (ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು) ಯನ್ನು ಪಡೆದಿರಬೇಕು. ಹಳೆಯ ಪಹಣಿಗಳನ್ನು ಗಣನೆಗೆ ತೆಗೆದುಕೊಳ್ಳಬಾರದು.
    c. ಅರ್ಜಿಯನ್ನು ಪರಿಶೀಲಿಸಿದ ನಂತರ ಸಹಾಯಧನ ಪಡೆಯಲು ಅರ್ಹ ವಿದ್ದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.
    d. ಒಂದು ವೇಳೆ ಫಲಾನುಭವಿ ಸಹಾಯಧನ ಪಡೆಯಲು ಅರ್ಹ ಇಲ್ಲದೆ ಹೋದಲ್ಲಿ ಅರ್ಜಿ ಸ್ವೀಕರಿಸಿದ 1 ವಾರದ ಒಳಗಾಗಿ ಯಾವ ಕಾರಣಕ್ಕೆ ಅವರ ಅರ್ಜಿ ಪರಿಗಣಿಸಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿ ಕೂಡಲೇ ಹಿಂತರುಗಿಸತಕ್ಕದ್ದು.

e. ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಪಾಲಿಸಿಕೊಂಡು ಜಿಲ್ಲಾ ಸಮಿತಿಯ ಗಮನಕ್ಕೆ ತಂದು ಅಥವಾ ಅನುಮತಿ ಪಡೆದು ಫಲಾನುಭವಿಗೆ ಮಾವು ತೋಟಗಳ ಪುನ:ಶ್ಚೇತನ ಮಾಡಲು ಅನುಮತಿ ನೀಡುವುದು.

ಅಗತ್ಯ ದಾಖಲಾತಿಗಳನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರಿಗೆ ಸಲ್ಲಿಸುವುದು. ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಫಲಾನುಭವಿಯೊಂದಿಗೆ ತಾಕುಗಳನ್ನು ಪರಿಶೀಲಿಸಿ ಯೋಜನೆಯ ಅನುಷ್ಠಾನದ ಗುಣಮಟ್ಟ ಹಾಗೂ ಸದರಿ ಘಟಕ ಅಳವಡಿಸಿರುವ ಪ್ರಮಾಣ ಕುರಿತಂತೆ ತೃಪ್ತಿಕರವಾಗಿದ್ದಲ್ಲಿ, ಅನುಷ್ಟಾನದ ವಿವರ ಹಾಗೂ ಫಲಾನುಭವಿಗಳ ಸಮೇತ ಫೋಟೊ ತೆಗೆದು ಫೋಟೊ ಹಾಗೂ ವರಧಿಯನ್ನು ಸತೋಅ (RSK) ಹಾಗೂ ಹಿಸತೋನಿ ದೃಡೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು.

## VII. ತಾಂತ್ರಿಕ ಪರಿಶೀಲನಾ ಕ್ರಮಗಳು :-

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

1. ಪೂರ್ಣ ಪ್ರಮಾಣದ ಕಾಮಗಾರಿ ಮುಗಿದ ಕೂಡಲೇ ತಾಲ್ಲೂಕು ಅಧಿಕಾರಿ / ಸಂಬಂಧಿಸಿದ ರೈತ ಸಂಪರ್ಕ ಅಧಿಕಾರಿ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ತಾಂತ್ರಿಕವಾಗಿಶಿಫಾರಸ್ಸು ಮಾಡಿರುವ ಪರಿಕರಗಳನ್ನು ಬಳಸಿರುವ ಬಗ್ಗೆ ಮತ್ತು ಫಲಾನುಭವಿಯ ತೋಟಗಾರಿಕೆ ಬೆಳೆ ತಳಿ ಮತ್ತು ಒಟ್ಟು ವಿಸ್ತೀರ್ಣದ ವಿವರಗಳನ್ನು ದೃಡೀಕರಿಸಿ ವರದಿ ನೀಡಬೇಕು. ಪರಿಶೀಲಿಸಿ ದೃಡೀಕರಿಸಿ ಖಾತ್ರಿ ಮಾಡಿಕೊಳ್ಳಬೇಕು.

2. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೊಸದಾಗಿ ಅನುಷ್ಠಾನ ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಹಿಂದಿನ ವರ್ಷಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಿರುವ ಅರ್ಜಿಗಳನ್ನು ಪರಿಗಣಿಸಬಾರದು.

3. ಅರ್ಜಿಯೊಂದಿಗೆ ಸಲ್ಲಿಸುವ ಎಲ್ಲಾ ದಾಖಲಾತಿ ಪತ್ರಗಳಿಗೆ ಆಯಾ ರೈತ ಸಂಪರ್ಕ ಕೇಂದ್ರದ ಸ.ತೋ.ಅ ಮತ್ತು ತಾಲ್ಲೂಕಿನ ಹಿ.ಸ.ತೋ.ನಿ./ಸ.ತೋ.ನಿ.ರವರು ಕಡ್ಡಾಯವಾಗಿ ದಿನಾಂಕ ನಮೂದಿಸಿ ದೃಡೀಕರಣ ಮಾಡಬೇಕು. ಅರ್ಜಿ ಸ್ವೀಕರಿಸಿದ ನಂತರ ಸಂಬಂಧಿಸಿದ ತಾಲ್ಲೂಕು ಅಧಿಕಾರಿ / ಸಂಬಂಧಿಸಿದ ರೈತ ಸಂಪರ್ಕ ಅಧಿಕಾರಿ ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡುವುದು. ಈ ಸಂಬಂಧದ ಛಾಯಾಚಿತ್ರಗಳನ್ನು ಕಡತದಲ್ಲಿರಿಸಬೇಕು.

## VIII.ಸಹಾಯಧನ ವಿತರಣೆ:

1. ಜಿಲ್ಲೆಯ ತೋಉನಿ(ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಸ.ತೋ.ನಿ/ಹಿ.ಸ.ತೋ.ನಿ. ನೀಡಿರುವ ಘಟಕದ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನ ಬಿಡುಗಡೆ ಮಾಡುವುದು.
2. ಸಹಾಯಧನ ಮೊತ್ತವನ್ನು ಫಲಾನುಭವಿಯ ಖಾತೆಗೆ ECS/NEFT ಮೂಖಾಂತರ ಜಮಾ ಮಾಡುವುದು.

## IX.ಆರ್ಥಿಕ ಪ್ರತ್ಯಾಯೋಜನೆ (Delegation of Power):

ಈ ಯೋಜನೆಯಡಿ ಮಾರ್ಗಸೂಚಿಯಂತೆ ಮಂಜೂರು ಮಾಡಲು ತೋಟಗಾರಿಕಾ ಉಪ ನಿರ್ದೇಶಕರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

X. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು):

1. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ KSHMA ಮತ್ತು ತೋಟಗಾರಿಕೆ ಉಪ ನಿರ್ದೇಶಕರ (ತೋಟಗಾರಿಕೆ ಮಾಹಿತಿ ಕೇಂದ್ರ) ಕಛೇರಿಗೆ ಕಳುಹಿಸುವುದು.